

ಕಣ್ಣು, ಮನಸ್ಸು ಮೆಚ್ಚುವಂತಹ ಒಂದೇ ಸಸ್ಯವನ್ನು ಸಲಹುವ ಮಿನಿಮಲಿಸ್ಟ್‌ಗಳ ಮನಸ್ಥಿತಿ 'ಸ್ಟೇಟ್‌ಮೆಂಟ್ ಪ್ಲಾಂಟ್'ಗಳ ಹೊಸ ಅಲೆ ಹುಟ್ಟುಹಾಕಿದೆ. ಹಸುರಿನ ವ್ಯಾಖ್ಯಾನದಂತಿರುವ ಈ ಸ್ಟೇಟ್‌ಮೆಂಟ್ ಗಿಡಗಳು ಮನೆಯ ಒಳಾಂಗಣಕ್ಕೆ ಮೆರುಗು ನೀಡಬಲ್ಲವು.



ಕೆಲವು ಸಸ್ಯಗಳನ್ನು ಈ ಕೆಳಗಿನಂತೆ ಉದಾಹರಿಸಬಹುದು.

- ಹಚ್ಚಹಸುರ, ಉದ್ದನೆಯ ಬಾಗುವ ಎಲೆಗಳನ್ನು ಹೊಂದಿರುವ 'ಕಾಸ್ಟ್ ಐರನ್ ಪ್ಲಾಂಟ್'. ಕಳಪೆ ನಿರ್ವಹಣೆಯಲ್ಲೂ ಬೆಳೆಯಬಲ್ಲ ಇವು ಆರಂಭಿಕರಿಗೆ ಹೇಳಿ ಮಾಡಿಸಿದ ಗಿಡಗಳು.
- ಮನೆಯ ಒಳಾಂಗಣದಲ್ಲಿ ಚೆನ್ನಾಗಿ ಬೆಳೆಯಬಲ್ಲ, ಕಂದು, ಹಸುರು, ಗುಲಾಬಿ ವಿವಿಧ ವರ್ಣಗಳಿಂದ ಮಿಶ್ರಿತವಾದ 'ರಬ್ಬರ್ ಪ್ಲಾಂಟ್'.
- ಕಾಡಿನ ಹಳೆ ಮರಗಳನ್ನು ಹೋಲುವ, ದಪ್ಪ ಒರಟು ಕಾಂಡ, ಕಾರಂಜಿಯಂತೆ ಚಿಮ್ಮಿ ಇಳಿಬೀಳುವ ಖಡ್ಗದಂಥ ಎಲೆಗಳ 'ಯುಕ್ಕಾ'.
- ಚೀಸ್‌ನ ತುಣುಕನ್ನು ಹೋಲುವಂತೆ ಎಲೆಯಲ್ಲಿ ರಂಧ್ರ ಹೊಂದಿರುವ ದೊಡ್ಡ ಗಾತ್ರದ 'ಮೊನೆಸ್ಟೆರಾ'.
- ಹಲವಾರು ಜಾತಿಯ, ಮರದಂತೆ ಎತ್ತರೆತ್ತರ ಬೆಳೆಯುತ್ತಾ ಸಾಗುವ 'ಡ್ರೆಸಿನಾ'ಗಳು.
- ಬಣ್ಣ ಬಣ್ಣದ ಎಲೆಗಳ 'ಕ್ರೋಟೋನ್'.
- ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ, ಪಿಟೀಲಿನಂತೆ ವಿಶೇಷ ವಿನ್ಯಾಸದ ಎಲೆಗಳನ್ನು ಹೊಂದಿರುವ 'ಫಿಡಲ್ ಲೀಫ್ ಫಿಗ್'.
- ಚಿಕ್ಕ ಚಿಕ್ಕ ನಾಣ್ಯದಂಥ ಎಲೆಗಳ, ಸಮೃದ್ಧ ಹಸುರಿನ ನೋಟ ನೀಡಬಲ್ಲ 'ವೀಪಿಂಗ್ ಫಿಗ್/ ಬೆಂಜಮೀನಾ ಫಿಗ್'.
- ಛತ್ರಿಯಂತೆ ಮೈ ಹರಡಿಕೊಂಡ ಬಿಳಿಹಸಿರು ಮಿಶ್ರಣದ ಎಲೆಗಳ 'ಶೆಫ್ಲರಾ'.
- ಬಾಳೆ ಗಿಡದ ಎಲೆಗಳನ್ನು ಹೋಲುವ, ಆಗಾಗ ಹೂ ಬಿಡುವ 'ಹೆಲಿಕೋನಿಯಾ/ಕಾಬಾಳೆಗಳು'.

### ಆರಂಭಕ್ಕೆ ಮುನ್ನ...

ಮೇಲಿನ ಯಾವುದೇ ಸಸ್ಯಗಳು 'ಸ್ಟೇಟ್‌ಮೆಂಟ್ ಲುಕ್' ನೀಡಲು ಮುಖ್ಯ ಕಾರಣ ನಮ್ಮ ಒಳಾಂಗಣ. ರಂಗುರಂಗಾದ ಚಿತ್ರ ರಚನೆಯಿರುವ ಗೋಡೆಯ ಮುಂದೆ ಇವು ಮಂಕಾಗಿ ಕಾಣಬಹುದು. ಬಿಳಿಯ ಗೋಡೆ ಮುಂದೆ ಪ್ರಕಾಶಿಸಬಲ್ಲವು. ಹಾಗಾಗಿ, ಸಸ್ಯಗಳ ಆಯ್ಕೆಗೂ ಮೊದಲು ಕೋಣೆಯ ವಿನ್ಯಾಸದ ಬಗೆಗಿನ ತಿಳಿವಳಿಕೆ ಮುಖ್ಯ. ಜೊತೆಗೆ ಕುಂಡಗಳ ಆಯ್ಕೆಯಲ್ಲಿನ ಜಾಣ್ಮೆ ಸ್ಟೇಟ್‌ಮೆಂಟ್ ಸಸ್ಯಗಳ ವೈಭವವನ್ನು ಹೆಚ್ಚಿಸಬಲ್ಲವು.

ಇವುಗಳ ಗಾತ್ರ ದೊಡ್ಡದಾದ ಕಾರಣ ಹತ್ತು–ಹನ್ನೆರಡು ಇಂಚಿನ ಕುಂಡಗಳು (ಅಥವಾ ಅದಕ್ಕಿಂತ ಹೆಚ್ಚು) ಅವಶ್ಯವಾಗಬಹುದು. ಈ ಕುಂಡಗಳನ್ನು ಪೂರ್ತಿ ಮಣ್ಣಿನ ಮಿಶ್ರಣದಿಂದ ತುಂಬುವ ಅಗತ್ಯವಿಲ್ಲ. ಅರ್ಧ ಕುಂಡವನ್ನು ಹಗುರವಾದ ತೆಂಗಿನ ನಾರು, ಇಟ್ಟಂಗಿ ಚೂರುಗಳಿಂದ ತುಂಬಬಹುದು. ಅಲ್ಲದೆ ಕುಂಡಗಳನ್ನು ಬರಿಯ ಕಂಟೇನರ್ ಆಗಿಯೂ ಬಳಸಬಹುದು.

ಗಾತ್ರ ದೊಡ್ಡದಾದ ಮಾತ್ರಕ್ಕೆ ಇವುಗಳ ನಿರ್ವಹಣೆ ಕಷ್ಟ ಎಂದು ತಿಳಿಯಬೇಕಿಲ್ಲ. ಉಳಿದ ಒಳಾಂಗಣ ಸಸ್ಯಗಳಿಗೆ ತೋರುವ ಬೆಳಕು–ನೀರು–ಪೋಷಕಾಂಶಗಳ ಆರೈಕೆಯನ್ನೇ ಇವು ಸಹ ನಿರೀಕ್ಷಿಸುತ್ತವೆ. ಪ್ರತಿದಿನವೂ ಇವುಗಳಿಗೆ ಕಾಳಜಿ ತೋರಬೇಕೆಂಬ ಅವಶ್ಯಕತೆಯೂ ಇರುವುದಿಲ್ಲ.

### ಮನೆಗಿದೋ ನವೀನ ರೂಪ

ಮನೆ ಒಳಾಂಗಣಕ್ಕೆ ಹೊಸ ರೂಪ ನೀಡಬೇಕಾದರೆ ಸುಣ್ಣ–ಬಣ್ಣ ಬಳಿಯುವ ಕಾಲ ದೂರವಾಯಿತು. ಕ್ಷಣ ಮಾತ್ರದಲ್ಲಿ ಸುಂದರ ಬದಲಾವಣೆಯ ಸ್ಪರ್ಶ ನೀಡಲು ನೀವು ಹಂಬಲಿಸುತ್ತಿದ್ದರೆ, ಈ ತರಹದ ಹೊಸ ಪ್ರಯತ್ನಕ್ಕೆ ಮುಂದಾಗಬಹುದು.

ನಿಸರ್ಗವೇನೋ ಹೊಸ ವಸಂತಕ್ಕೆ ತಯಾರಿ ನಡೆಸುತ್ತಿದೆ. ನೀವೂ ಇಂಥ 'ಸ್ಟೇಟ್‌ಮೆಂಟ್ ಪ್ಲಾಂಟ್'ನೊಂದಿಗೆ ಈ ವರ್ಷ ಮನೆಗೆ ನವೀನ ರೂಪ ನೀಡಿ, ವಸಂತವನ್ನು ಖುಷಿಯಿಂದ ಸ್ವಾಗತಿಸಿ.

ಪ್ರತಿಕ್ರಿಯಿಸಿ: feedback@sudha.co.in